ದಿನ ಪತ್ರಿಕೆ
Reg No. M 120
Daily & Weekly
For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 28 ಸುಚಿಕೆ 317] ಸೋಮವಾರ 21—6—1943 [3 ಪೈ

ಹೆಚ್. ಆರ್. ಜಿ. ಸಿ. ಯವರ
ಶ್ರೀ ವಿಕ್ರಮ್
ತಯಾರಿಕೆ
ವಾಣಿ OR
[Violinist]
ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗನೆ ಒರಲಿದೆ

ಫೋರ್ಡ್ ಕಂಪೆನಿ ಮುಷ್ಕರ

ಅಮೇರಿಕಾದ ಫೋರ್ಡ್ ಕಂಪೆನಿಯ ಆದು ಇಲಾಖೆಯವರು ಸುಮಾರು 150 ಮೇಸ್ತ್ರಿಗಳು ತಮ್ಮ ಸಂಸ್ಥೆಯ 50 ಸದಸ್ಯರನ್ನು ಕೆಲಸದಿಂದ ತೆಗೆದು ಹಾಕಿದರೆಂದು ಕೆಲಸಕ್ಕೆ ಹೋಗದೆ ನಿಂತಿರುತ್ತಾರೆ. ಭಾನುವಾರದೊಳಗಾಗಿ ಅಲ್ಲಿಯ 10 ಸಾವಿರ ಕೆಲಸಗಾರರು ಸಹ ಕೆಲಸಕ್ಕೆ ಹೋಗಲಾರರೆಂದು ಹೇಳಲಾಗಿದೆ. ಇದರಿಂದ ಯುದ್ಧೋದ್ಯಮ ಕಾರ್ಯಗಳಿಗೆ ಲೋಪವಿಲ್ಲವೆಂದೂ, ಸೂಪರ್ವೈಜರುಗಳೆ ಹಗಲೂ ರಾತ್ರಿ ಕೆಲಸಮಾಡುವರೆಂದೂ ಹೇಳಲಾಗಿದೆ.

ಅಮೇರಿಕಾ ಕಲ್ಲಿಜ್ವಲು ಗಣಿಯಲ್ಲಿ ಪುನಃ 50 ಸಾವಿರ ಕೂಲಿಗಾರರು ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತಿರುವರು.

ನಿನ್ನೆ ದಿವಸ ಜಪಾನೀಯರು ಡಾರ್ವಿನ್ ಮೇಲೆ 48 ವಿಮಾನಗಳನ್ನು ತಂದು 22 ವಿಮಾನಗಳನ್ನು ಕಳೆದುಕೊಂಡು ಹೋದರು.

ನಿನ್ನೆ ದಿವಸ ಮಿತ್ರರು ರಾಬೂಲ್ ಮೇಲೆ ಧಾಳಿ ಮಾಡಿ 41 ಟನ್ನಿನಷ್ಟು ಸಿಡಿಮದ್ದನ್ನು ಸುರಿದರು. ಅಲ್ಲದೆ, ಸವಾರ್‌ಗಳ ಮೇಲೂ ಧಾಳಿ ನಡೆಸಿದರು ಬೆಂಬೆಕ್ ಮೇಲೆ ಜಪಾನರು ಧಾಳಿಮಾಡಲು ಬಂದು ಮಿತ್ರರ ಹೊಡೆತದಿಂದ ಹಿಂದಿರುಗಬೇಕಾಯಿತು.

ಹೊಸ ವೈಸರಾಯರು

ಫೀಲ್ಡ್ ಮಾರ್ಷಲ್ ವೇವಲರನ್ನು ಮುಂದಿನ ವೈಸರಾಯಿ ಪದವಿಗೆ ನೇಮಿಸಿದ್ದರಿಂದ " ಭಾರತ ಸರಕಾರವು ಈಗ ಪಾರ್ಷಲ್ ಆಗಿ ದಂತಿರುವ ಆರ್ಡಿನೆನ್ಸುಗಳಿಂದ ನಡೆಯುತ್ತಿದೆ. ಇದೇ ರೀತಿಯಲ್ಲಿ ಸರಕಾರವು ನಡೆಯಬೇಕಾದರೆ ಮಿಲಿಟರಿ ಅಧಿಕಾರದಲ್ಲಿರುವದೇ ಒಳ್ಳೇದು " ಎಂದು ಒಂಗಾಳಾ ಕಾಂಗ್ರೆಸ್ ಪಾರ್ಲಿಮೆಂಟರಿ ಸದಸ್ಯರಾದ ಶ್ರೀ ಕಿರಣ್ ಶಂಕರ ರಾಯ್ ರವರು ಹೇಳಿರುವರು.

ಮ್ಯಾಜಿಸ್ಟ್ರೇಟರ ದಸ್ತಗಿರಿ

ಜೂನ್ 11 ರಲ್ಲಿ ಪಾಟ್ನಾದ ಸಬ್ ಮ್ಯಾಜಿಸ್ಟ್ರೇಟರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅವರು ತಮ್ಮ ಹೆಂಡತಿಯನ್ನು ನೂಕಿದರೆಂದೂ, ಆಕೆಯು ನದಿಯಲ್ಲಿ ಬಿದ್ದು ಮುಳುಗುತ್ತಿದ್ದಾಗ ಯಾರೋ ಪುಣ್ಯಾತ್ಮರು ಆಕೆಯನ್ನು ಒದುಕಿಸಿದರೆಂದೂ, ಆಗಿನಿಂದ ಮ್ಯಾಜಿಸ್ಟ್ರೇಟರು ತಲೆತಪ್ಪಿಸಿಕೊಂಡಿದ್ದರೆಂದೂ, ಈಗ ಇವರು ಸಿಕ್ಕಿ ಪೀನಲ್ ಕೋಡು 307 ರ ಪ್ರಕಾರ ಪೋಲೀಸರ ವಶವಲ್ಲಿದ್ದಾರೆಂದೂ ತಿಳಿಯಬಂದಿದೆ.

ಜಿಬ್ರಾಲ್ಟರಿನಲ್ಲಿ

ಈಗ ಜಿಬ್ರಾಲ್ಟರಿನಲ್ಲಿ ಮಿತ್ರರ 74 ನೌಕೆಗಳೂ, 1 ಯುದ್ಧ ಹಡಗು, 2 ಏರ್‌ಕ್ರಾಫ್ಟ್ ಕ್ಯಾರಿಯರ್, 10 ಡಿಸ್ಟ್ರಾಯರ್ ಇರುವುದೆಂದೂ, ಅಮೇರಿಕಾದಿಂದ 8 ಸಾಮಾನು ಹಡಗುಗಳೂ, 3 ಡಿಸ್ಟ್ರಾಯರುಗಳೂ ಬಂದಿರುವುದೆಂದೂ ಗೊತ್ತಾಗಿದೆ.

New Opera Talkies — Aryamala
ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ
ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು
ಅಪೆರಾ ಆರ್ಯಮಾಲಾ
6th Week ನೇವಾರ

ಯುದ್ಧವಾರ್ತೆ

ಕುರ್ಸ್ಕ್ ರಣಕ್ಷೇತ್ರದಲ್ಲಿ ರಷ್ಯನರು ಹೊಸಬಲವಾಗಿ ಸೇನೆಗಳನ್ನು ಶೇಖರಿಸುತ್ತಿರುವರು. ಬೇಸಿಗೆಯಲ್ಲಿ ರಷ್ಯನರು ತಾವೇ ಜರ್ಮನರ ಮೇಲೆ ಬೀಳುವಂತಿದೆ. ನಾಜಿಗಳ ವಿಮಾನ ನಿಲ್ದಾಣಗಳು ಅನೇಕ ಕಡೆ ಆಗ್ನಿಗೆ ಆಹುತಿಯಾಗಿದೆ. ಹಿಟ್ಲರು ಮುಂದೆ ನುಗ್ಗದಂತೆ ರಷ್ಯನರು ಏರ್ಪಾಡನ್ನು ಮಾಡುತ್ತಿದ್ದಾರೆ.

ಂ ಂ

ಈ ವರ್ಷ ಯುದ್ಧಕ್ಕೆ ಅಮೇರಿಕಾ ಸರಕಾರವು 71510 ಮಿಲಿಯ ಡಾಲರುಗಳನ್ನು ವ್ಯಯ ಮಾಡುವುದು. ಇದುವರೆಗೆ ಇಷ್ಟು ಹಣವನ್ನು ಯಾರೂ ಖರ್ಚು ಮಾಡಿರುವುದಿಲ್ಲ.

ಂ ವ

ಯಾರೇ ಆಗಲಿ ಸ್ವೀಡ್ ದೇಶವನ್ನು ಮುತ್ತಿದರೆ ಅವರನ್ನು ಎದುರಿಸಲು ಸ್ವೀಡನ್ನಿನ ಸರಕಾರವು ಸಿದ್ಧವಾಗಿರುವುದೆಂದು ಹೇಳಲಾಗಿದೆ.

ಂ ಂ

ತುರ್ಕಿಯು ದಕ್ಷಿಣ ಭಾಗದಲ್ಲಿ ಬ್ರಿಟಿಷ್ ಸೇನೆಯು ವಿಶೇಷವಾಗಿ ಶೇಖರಣೆಯಾಗಿದೆಯೆಂದು ಲಂಡನ್ನಿಂದ ವರ್ತಮಾನ ಬಂದಿದೆ.

ಂ ಂ

ಗ್ರೀಸ್ ರಾಜ್ಯವನ್ನು ಮಿತ್ರರು ಮುತ್ತುವರೆಂದು ನಾಜಿಗಳು ಭಯಗ್ರಸ್ತರಾಗಿರುವರು.

ಂ ಂ

ನಿನ್ನೆ ದಿವಸ ಮಿತ್ರರ ವಿಮಾನಗಳು ಜರ್ಮನಿಯು ಆಧೀನದಲ್ಲಿರುವ ಫ್ರಾನ್ಸಿನ ಸ್ಕೋಡಾ ಕಾರ್ಖಾನೆಯ ಮೇಲೆ ಧಾಳಿ ಮಾಡಿದವು. ಅಲ್ಲದೆ ಅದರ ಸಮೀಪದಲ್ಲಿದ್ದ ವಿದ್ಯುಚ್ಛಕ್ತಿ ಕಾರ್ಖಾನೆಗಳನ್ನೂ ನಷ್ಟಪಡಿಸಿದವು.

ನಿನ್ನೆ ದಿವಸ ಮಿತ್ರರ ವಿಮಾನಗಳು ಸಿಸಲಿಯಲ್ಲಿರುವ ಸಿರಕೂಸ್ ಮೇಲೆ ಧಾಳಿ ಮಾಡಿದವು. ಇದೊಂದು ಮುಖ್ಯವಾದ ಬಂದರು. ಇಲ್ಲಿದ್ದ ಅನೇಕ ನೌಕೆಗಳಿಗೆ ಪೆಟ್ಟು ಬಿದ್ದಿತು.

ಂ ಂ

ಇಟಲಿಗೂ ಜರ್ಮನಿಗೂ ಮಧ್ಯೆ ಇರುವ ಬ್ರೆನ್ನೆರ್ ಕಣಿವೆ ಮಾರ್ಗವನ್ನು ಜರ್ಮನರು ಪ್ರಯಾಣಕ್ಕೆ ಬಂದು ನೋಡಿರುವರು.

ಂ ಂ

ವಿನ್ಸೆ ಚೀನೀಯರು ಯಾಂಗಟೀಸ್ ನದಿ ತೀರದಲ್ಲಿ ಮತ್ತೆ 4 ಪಟ್ಟಣಗಳನ್ನು ಜಪಾನೀಯರಿಂದ ವಶಪಡಿಸಿಕೊಂಡರು.

ಂ ಂ

ರಷ್ಯಾ ರಣಕ್ಷೇತ್ರದಲ್ಲಿ ಕಳೆದ ವಾರ ಜರ್ಮನರ 276 ವಿಮಾನಗಳು ನಷ್ಟವಾದವು, ರಷ್ಯಾದವರ ನಷ್ಟ 94 ಮಾತ್ರ.

ಂ ಂ

ಅಮೇರಿಕಾದಲ್ಲಿ ಈ ವರ್ಷ ಅಂತ್ಯದಲ್ಲಿ 65 ಲಕ್ಷ ಜನರನ್ನು ಸೇನೆಗೆ ಸೇರಿಸಿಕೊಳ್ಳುವರು.

ಂ ಂ

ಈಗ ಮಿತ್ರರಲ್ಲಿ 1—1 ಮಿಲಿಯ ಸೇನೆ ಇರುವುದು. ಇದರಿಂದ ಯೂರೋಪು ಮುತ್ತುವುದು ಸಾಧ್ಯವೆಂದು ರಷ್ಯನ್ನರ ಆಸೆ. ಬ್ರೀಟರು ಈಗ 2—3 ಮಿಲಿಯ ಸೇನೆಯನ್ನು ಸುಲಭವಾಗಿ ರಣರಂಗಕ್ಕೆ ಬಿಡಬಹುದು ಈಗ ಮಾತ್ರ ತಿಂಗಳಿಗೆ 6000 ಟ್ಯಾಂಕ್, 10 ಸಾವಿರ ಗುಂಡು, 10—11 ಸಾವಿರ ವಿಮಾನ ತಯಾರಾಗುತ್ತಿವೆ. ಜರ್ಮನಿಯು ತಿಂಗಳಿಗೆ 3—4 ಸಾವಿರ ಗುಂಡು 4 ಸಾವಿರ ವಿಮಾನಗಳನ್ನು ಮಾತ್ರ ತಯಾರಿಸುವುದು. ಈಗ ಬ್ರಿಟನ್ ಮತ್ತು ಅಮೇರಿಕಾ ತಮ್ಮ ಶತ್ರುಗಳಿಗಿಂತ ಎರಡರಷ್ಟಕ್ಕಿಂತ ಹೆಚ್ಚಾಗಿ ಇಟ್ಟುಕೊಂಡಿರುವವೆಂದು ರಷ್ಯಾ ಪತ್ರಿಕೆಗಳ ಅಭಿಪ್ರಾಯ.

ಬ್ರಿಟಿಷ್ ನೂತನ ವಿಮಾನ.

ಬ್ರಿಟಿಷಾರು ಈಗ ಒಂದು ಹೊಳಪು ಮಾಡಿದ ವಿಮಾನವನ್ನು ತಯಾರಿಸಿದ್ದಾರೆ. ಇದರ ಹೆಸರು ಬ್ರಿಸ್ಟಲ್ ಬ್ಲೂಫೈಟರ್. ಪ್ರಪಂಚದಲ್ಲಿ ಇದಕ್ಕಿಂತ ಉತ್ತಮವಾದ ವಿಮಾನ ಇಂದಿಲ್ಲ. ಇದು ಗಂಟೆಗೆ 330 ಮೈಲಿ ಯಂತೆ ಓಡಬಲ್ಲುದು; ಅದೂ 14 ಸಾವಿರ ಅಡಿ ಎತ್ತರದಲ್ಲಿ. ಒಂದು ಸಲ ಎಣ್ಣೆಯನ್ನು ತುಂಬಿಕೊಂಡ 1500 ಮೈಲಿ ದೂರ ಹಾರಬಲ್ಲುದು. ಈಗ ಇದನ್ನು ಜಪಾನಿನ ಕಡೆಯಲ್ಲಿ ಬಿಡುತ್ತಿದ್ದಾರೆ. ಇದೇ ವಿಮಾನ ಇಂಗ್ಲೆಂಡಿನಲ್ಲಿ ಕೆಲಸವಾಡಿ ಖ್ಯಾತಿಗೆ ಬಂದಿದೆ.

o o

ಸಿನಿಮಾ ನಟಿಗಳ ಸಂಪಾದನೆ.

ಕೆ. ಬಿ. ಸುಂದರಂಬಾಳ್ ರವರಿಗೆ ಇದುವರೆಗೆ ಹೆಚ್ಚಾಗಿ ಹಣ ಸಂದಾಯವಾಗಿದೆ. ಎಂ. ಎಸ್. ಸುಬ್ಬಲಕ್ಷ್ಮೀಯವರಿಗೆ ಪ್ರತಿಯೊಂದಕ್ಕೂ ಎಲ್ಲರಿಗಿಂತಲೂ ಹೆಚ್ಚಾಗಿ ಹಣ ಕೊಟ್ಟಹೊರ್ತು ಸಾಕ್ಷಿ ವಹಿಸುವುದಿಲ್ಲ. ಎಂ. ಕೆ. ಟಿ ಕನ್ನಂಬಾಯರಿಗೆ ಪ್ರತಿಯೊಂದು ಪಿಕ್ಚರ್‌ಗೂ 30 ಸಾವಿರ ರೂಪಾಯಿ ಕೊಡಬೇಕು. ಎಂ ಕೆ. ಟಿ. ಭಾಗವತರ್, ಪಿ. ವಿ. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಕೆ ಎಲ್. ವಿ. ವಸಂತ, ಪುಷ್ಪವಲ್ಲಿ, ಕೃಷ್ಣನ್, ಮಧುರಂ ಇವರೆಲ್ಲರೂ ಹೆಚ್ಚಾಗಿ ಹಣ ಕೊಡದ ಹೊರ್ತು ಪಾರ್ಟು ಮಾಡುವವರಲ್ಲ.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ಸೀಮೆಎಣ್ಣೆ ಅಭಾವವೇ ಇಲ್ಲ.

ಅಮೆರಿಕಾ ಡ್ಯೂಪೌಂಟ್‌ನಲ್ಲಿರುವ ಮಾರ್ಟ್‌ಡೆಸಿಂಗ್ ಕಂಪನಿಯವರು ಒಂದು ತರಹ ಬಣ್ಣವನ್ನು (ಪೇಂಟ್) ತಯಾರು ಮಾಡಿರುವರು. ಈ ಬಣ್ಣವನ್ನು ಸಮುದ್ರದಲ್ಲಿ ಗೋಡೆಯಮೇಲೆ ಒಳಿದರೆ ರಾತ್ರಿ ಕಾಲದಲ್ಲಿ ಇದು ಥಳಥಳಿಸುವ್ಯಾ ಬೆಳಕನ್ನು ಕಾರುವುದು. ದ್ವೀಪದ ಹತ್ತಿರ ಸುಳಿಯುವ ಹಡಗುಗಳಿಗೆ ಈ ಬಣ್ಣವು ಸೀಮೆಎಣ್ಣೆಯ ಕೊರತೆಯನ್ನು ಕೊಂಚಮಟ್ಟಿಗೆ ತಪ್ಪಿಸಬಹುದು.

o o

ಹೆಂಡತಿಯ ಖರೀದಿ

ಪಶ್ಚಿಮ ಆಫ್ರಿಕಾದ ಲಿಬ್ಬಿಯಾದಲ್ಲಿ ಒಬ್ಬ ಹೆಂಡತಿಯ ಕ್ರಯವು 15 ಪೌಂಡು.

o o

ಜಿನ್ನಾರವರ ಮುಂಬಯಿ ಆಸ್ತಿ.

ಈಗ ಕೆಲವು ದಿವಸಗಳ ಕೆಳಗೆ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಮಾರಿ ತಮ್ಮ ಪಾಕಿಸ್ತಾನ್ ರಾಜಧಾನಿಯಾದ ಲಾಹೋರಿನಲ್ಲಿ ನೆಲೆಯಾಗಿ ನಿಲ್ಲಲು ಅಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುವರೆಂದು ಬರೆದಿದ್ದುದನ್ನು ಸುಳ್ಳೆಂದು ಮಿ|| ಜಿನ್ನಾರವರು ಪ್ರಕಟಿಸಿದ್ದರು. ಈಗ ಮಿ|| ಜಿನ್ನಾರವರು ತಮ್ಮ ಮುಂಬಯಿ ಆಸ್ತಿಯನ್ನು ಮಾರುವವರಾಗಿರುವರು. ಮನೆ ವಗೈರೆಯನ್ನು ಲಾಹೋರಿನಲ್ಲಿ ಮಾಡುವರು. ತಮ್ಮ ಬಳಿಯಲ್ಲಿರುವ ಯೂರೋಪಿಯರ್ ದರ್ಜಿಯವರು ಹೊಲೆದ 1003 ಸೂಟ್‌ಗಳನ್ನು ಮುಂಬಯ್ಯಿ ಪರಿವಾಸಿ ಮತ್ತು ಪಾಜಾವಿಗೂ ಬರಲಾಯಿಸುತ್ತಾರೋ?

Ranjit — — Satyabhama

ರಣಜಿತ್ ಟಾಕೀಸ್

3rd Week ಸತ್ಯಭಾಮಾ [ತೆಲುಗು]

ವೈ ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ

ವಿಶ್ವತರಂಗ

ಅರೇಬಿಯಾದ ಇಬ್ಬರು ರಾಜಕುಮಾರರು ಸ್ವಂತ ಕರಾಚಿಯಿಂದ ಬೊಂಬಾಯಿಗೆ ಸೆಕೆಂಡ್ ರೈಲಿನಲ್ಲಿ ಬಂದರು. ಇವರನ್ನು ಸರ್ಕಾರದ ಪರ ಗಾರ್ಡ್ ಮೆಂಟು ಅಂಡರ್ ಸೆಕ್ರೆಟರಿಯವರೂ, ಅರೇಬಿಯಾ ಇರಾಕ್ ವ್ಯವಹಾರದಲ್ಲಿನ ರಾಯಭಾರಿಗಳೂ, ಇತರರೂ ಸ್ವಾಗತಿಸಿದರು. ರಾಜಕುಮಾರರು ಬೊಂಬಾಯಿನಲ್ಲಿ ಕೆಲವು ದಿವಸಗಳು ಇರಲಿದ್ದಾರೆ.

o o

ಲೀಸ್ ಎಂಡ್ ಲೆಂಡ್ ಬಿಲ್ ಪ್ರಕಾರ ಅಮೇರಿಕಾದವರು ತಾವು ಇತರ ದೇಶಗಳಿಗೆ ಎರವು ಕೊಟ್ಟ ಪದಾರ್ಥಗಳಲ್ಲಿ ರಷ್ಯಾಕ್ಕೆ ನಾಲ್ಕರಲ್ಲಿ ಒಂದು ಭಾಗ ಸೇರಿದೆ. ಅಂದರೆ 197 ವರೆ ಮಿಲಿಯನ್ ಡಾಲರ್ ಬೆಲೆಯಷ್ಟು. ಇದನ್ನು 18 ತಿಂಗಳ ಅವಧಿಯಲ್ಲಿ ಕಳಿಸಿರುತ್ತಾರೆ. ಇದನ್ನು ನೋಡಿದರೆ ಅಮೇರಿಕಾದವರು ರಷ್ಯಾದ ವಿಷಯದಲ್ಲಿ ಎಷ್ಟು ಪ್ರೇಮವುಳ್ಳವರಾಗಿರುವರೆಂದು ಗೊತ್ತಾಗುವುದು.

o o

ಚಕ್ರವರ್ತಿಗಳು ಟುನಿಸಿಯಾದಲ್ಲಿ ನಿತ್ಯವೂ ತಮ್ಮ ಸೇನೆಗಳನ್ನು ನೋಡಿ, ಕಷ್ಟ ಸುಖ ವಿಚಾರಿಸುವದೇಆಗಿದೆ. ನಿನ್ನೆ 120 ಮೈಲಿ ಪ್ರವಾಸ ಮಾಡಿದರು. ಮೈಲಿ ಮೈಲಿಗೂ ಜನರು ಕಿಕ್ಕಿರಿದು ನಿಂತಿದ್ದರು. ರಾತ್ರಿಯಾಗುತ್ತಲೇ ಟ್ಯೂನಿಸ್ಸಿಗೆ ವಿಮಾನದಲ್ಲಿ ಪ್ರಯಾಣಮಾಡಿದರು.

o o

ಹೋದ ತಿಂಗಳಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನ್ ಸಬ್‌ಮೆರಿನಿಗೂ ಮಿತ್ರರ ನೌಕೆಗಳಿಗೂ 5 ದಿವಸ ಬಲವಾದ ಕದನ ನಡೆಯಿತು. ಶತ್ರುಗಳ 5 ಸಬ್‌ಮೆರೀನ್ ಮುಳುಗಿತು, ಮತ್ತು ಕೆಲವಕ್ಕೆ ತುಂಬ ಜಖಂ ಆಯಿತು. ಮಿತ್ರರ ಕಾನ್‌ವಾಯಿನಲ್ಲಿದ್ದ ಹಡಗುಗಳಲ್ಲಿ ಶೇಕಡ 97 ರಂತೆ ದಡವನ್ನು ಸೇರಿದವು.

ಸಿನ್ನೆ ದಿನದ ಬಟಲಿಯು ಫಾಸಿಸ್ಟ್ ವಾರ್ಷಿಕೋತ್ಸವವು ನಡೆಯಿತು. ಮುಸಲೋನಿಯು ಸಂಭಾಷಣೆಯನ್ನು ಮಾಡಿದನು. ಗಂಡಸರು 18 ರಿಂದ 36 ವರ್ಷ ಹೆಂಗಸರು 18 ರಿಂದ 21 ವರ್ಷ, ಯುದ್ಧದಲ್ಲಿ ಗಾಯಗೊಂಡು ಈಗ ವಾಸಿಯಾಗಿರುವವರು. ಇವರೆಲ್ಲಾ ಪೂರ್ಣಾಯುಷಿಕವಾಗಿ ಯುದ್ಧೋದ್ಯಮವನ್ನು ಕಾರ್ಯದಲ್ಲಿ ಭಾಗಿಗಳಾಗಿರಬೇಕೆಂದು ನಿರ್ಣಯ ಮಾಡಲಾಯಿತು.

o o

ಹಿಟ್ಲರ್ ರಷ್ಯಾ ದಂಡಯಾತ್ರೆಗೆ ಹೊರಟಾಗ 20 ಲಕ್ಷ ಸೇನೆಸಮೇತ ಹೊರಟನು. ಈಗ ರಷ್ಯಾದಲ್ಲಿ ಇವನ ಸೇನೆ 2 ಲಕ್ಷಕ್ಕೆ ಕಮ್ಮಿಯಿದೆಯಂತೆ.

o o

ಭಾರತ ವೈಸರಾಯಿ ಪದವಿ ಫೀಲ್ಡ್ ಮಾರ್ಷಲ್ ವೇವಲ್‌ರವರಿಗೆ ತಡವಾಗಿ ಲಂಡನ್, ವಾಷಿಂಗ್‌ಟನ್ ಹತ್ಯಕೆಗಳು ಇವರೇ ಸರಿಯಾದವರು ಎಂದು ಹೊಗಳಿ ಬರೆದಿವೆ.

o o

ಇಟಲಿ ದಕ್ಷಿಣಭಾಗದಲ್ಲಿ ಪೂರ್ಣಾಲಾ ಜಾರಿಗೆ ಒಂದಿದೆ.

o o

ಮದರಾಸ್ ಪಟ್ಟಣದಲ್ಲಿ ಆಂಗ್ಲೋಯರ ಹೋಟಲಿನಲ್ಲಿ ಅಕ್ಕಿ ಅಫನಾ ಅಕ್ಕಿ ಹಿಟ್ಟಿನ ಆಹಾರ ಪದಾರ್ಥಗಳನ್ನು ಉಪಯೋಗಿಸಬಾರದೆಂದು ಸರ್ಕಾರಿ ಆಜ್ಞೆಯಾಗಿದೆ.

o o

ಐಸಲೆಂಡಿನಲ್ಲಿದ್ದ ಅಮೇರಿಕ್ ಸೇನಾನಿಯನ್ನು ಇನ್ನೆಲ್ಲಿಗೋ ವರ್ಗವಾಡಿ ಬ್ರಿಟಿಷ್‌ನಲ್ಲಿ ಜೇ ಮಾಸ್ಟರ್ ಆಗಿದ್ದವರನ್ನು ನೇಮಿಸಿರುವರು.

o o

ನೇ ತಿಂಗಳಲ್ಲಿ ಅಮೇರಿಕಾದವರು 7200 ವಿಮಾನಗಳನ್ನು ತಯಾರಾಡಿರುವರು.

ಅಕ್ಕಿಸುಧಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅಪರಿಮಿತ ಶಕ್ತಿ ಉಂಟಾಗುವುದು ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ.